

ಗತಿಗಳನ್ನು ತನಗೆ ತಾನೇ ಹೇಳಿಕೊಂಡ ಸ್ಥಳವನ್ನು, ಹೆಂಡತಿಯೊಂದಿಗೆ ಕೂತು ಊಟ ಮಾಡಿದ ಜಾಗವನ್ನು, ಪುಸ್ತಕಗಳು ತನ್ನ ರಕ್ತದಷ್ಟೇ ಮುಖ್ಯ ಎಂದು ತಿಳಿದು ಕೊನೆಯವರೆಗೂ ಅವುಗಳನ್ನು ಅಪ್ಪಿ ತಬ್ಬಿದ ಅವರ ಗ್ರಂಥಾಲಯವನ್ನು — ಈ ಎಲ್ಲವನ್ನೂ ಕಣ್ತುಂಬಿಕೊಳ್ಳಬೇಕು ಎನ್ನುವ ಆಸೆ ಬಹು ದಿನಗಳದ್ದು.

ಯಾವ ಮುಖ್ಯವಾದ ಸ್ಥಳವೂ– ಅದು ನಾಡನ್ನು ಕಟ್ಟಿದವರ ಮನೆಯಾಗಿರಬಹುದು, ಅವರ ಸಮಾಧಿಯೂ ಆಗಿರಬಹುದು– ಏನೇನೋ ಆಗಿಬಿಡುತ್ತಿರುವ ವಿಷಮ ಕಾಲಘಟ್ಟ ಇದು. ಅವುಗಳನ್ನು ನವೀಕರಿಸುವ, ಸ್ಮಾರಕವಾಗಿಸುವ ಹೆಸರಿನಲ್ಲೇ ಅವುಗಳನ್ನು ಹೇಳಹೆಸರಿಲ್ಲದಂತೆ ಮಾಡುವ ಅನೇಕ ಉದಾಹರಣೆಗಳನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಪುರಾವೆಯೋ ಎಂಬಂತೆ ಕೆಲವು ದಿನಗಳ ಹಿಂದೆ ವ್ಯಕ್ತಿಯೊಬ್ಬ ರಾಜಾರೋಷವಾಗಿ ಅಂಬೇಡ್ಕರರ ರಾಜಗೃಹಕ್ಕೆ ನುಗ್ಗಿ ಅವರ ಮನೆಯ ಕಿಟಕಿ ಬಾಗಿಲುಗಳಿಗೆ ಕಲ್ಲು ಹೊಡೆದದ್ದು, ಜನ್ಮ ಜನ್ಮಾಂತರಗಳ ದ್ವೇಷವೋ ಎಂಬಂತೆ ಹೂಕುಂಡಗಳನ್ನು ಒಡೆದ ದುರಂತ ಘಟನೆಯೂ ನಡೆಯಿತು. ಆ ಘಟನೆ ನಡೆದ ಮೇಲಂತೂ ಅಂಬೇಡ್ಕರ್ ಅವರ ಮನೆಯನ್ನು ನೋಡಲೇಬೇಕೆನ್ನುವ ಆಸೆ ಇನ್ನೂ ಉತ್ಕಟವಾಯಿತು. ಈ ನಡುವೆ ಮುಂಬೈಗೆ ಅದೆಷ್ಟೋ ಬಾರಿ ಹೋದರೂ ಕಾಲದ ಮತ್ತು ಕಾರ್ಯದ ಒತ್ತಡದಿಂದಾಗಿ ರಾಜಗೃಹವನ್ನು ನೋಡಲು ಆಗಿರಲೇ ಇಲ್ಲ. ಕಳೆದ ಸೆಪ್ಟೆಂಬರ್‌ನಲ್ಲಿ ವಿಚಾರಸಂಕಿರಣವೊಂದಕ್ಕೆ ಮುಂಬೈಗೆ ಹೋಗಬೇಕಾಗಿತ್ತು. ಆಗ ವಿಚಾರಸಂಕಿರಣಕ್ಕೆ ಒಂದು ದಿನ ಮುಂಚೆಯೇ ಮುಂಬೈ ಅನ್ನು ತಲುಪಿದ್ದೇ ಸೀದಾ ಹೋದದ್ದೇ ರಾಜಗೃಹಕ್ಕೆ. ಅಲ್ಲಿಗೆ ಹೋಗಲೆಂದು ಕ್ಯಾಬ್ ಬುಕ್ ಮಾಡಿದೆ. ಕ್ಯಾಬ್‌ನಲ್ಲಿ ಕೂತ ಕೂಡಲೇ ಚಾಲಕನಿಗೆ 'ಅಂಬೇಡ್ಕರ್ ಮನೆ ಗೊತ್ತಾ?' ಎಂದು ಕೇಳಿದೆ. ಆತ, 'ನೋಡಿದ್ದೇನೆ ಅನಿಸುತ್ತದೆ' ಎಂದು ಅಸ್ಪಷ್ಟವಾಗಿ ಉತ್ತರಿಸಿದ.

ದಾದರ್‌ನಲ್ಲಿದ್ದ ಅಂಬೇಡ್ಕರ್ ಅವರ ಮನೆಯನ್ನು ಕೊನೆಗೂ ತಲುಪಿದೆ. ಇಳಿದ ಕೂಡಲೇ ಆ ಕಟ್ಟಡವನ್ನು ಮೊದಲು ಹೊರಗಿನಿಂದಲೇ ಕಣ್ತುಂಬಿಕೊಂಡೆ. ದಾದರ್‌ನ ಹಿಂದೂ ಕಾಲೋನಿಯಲ್ಲಿ ಈ ಮನೆ ಇದೆ. ಇವತ್ತು ಹಿಂದೂ ಪರಿಕಲ್ಪನೆಯ ಬಗೆಗೇ ನಡೆಯುತ್ತಿರುವ ತಾರ್ಕಿಕ, ಅತಾರ್ಕಿಕ, ಮೂಲಭೂತವಾದಿ ಚರ್ಚೆಗಳ ಹಿನ್ನೆಲೆಯಲ್ಲಿ ಆ ಮನೆ ಹಿಂದೂ ಕಾಲೋನಿಯಲ್ಲಿ ಇದೆ ಎನ್ನುವುದು ಒಂದು ಗಳಿಗೆ ನನಗೆ ವಿಪರ್ಯಾಸದಂತೆ ಕಂಡಿತ್ತು. ಸ್ನೇಹಿತರನ್ನು ವಿಚಾರಿಸಲಾಗಿ, ಆ ಇಡೀ ಬಡಾವಣೆಯಲ್ಲಿ ಕ್ಯಾಥೋಲಿಕರೂ ಹಾಗೂ ಗುಜರಾತಿಗಳು ಬಹುಸಂಖ್ಯಾತರಲ್ಲಿ ಇದ್ದಾರೆನ್ನುವುದು ತಿಳಿಯಿತು.

ಬಹುಶಃ ರಾಜಗೃಹದ ಮೇಲಿನ ಆಕ್ರಮಣದ ನಂತರ ಆ ಮನೆಯ ಸುರಕ್ಷತೆಯನ್ನೂ ಹೆಚ್ಚಿಸಲಾಗಿದೆ ಎನ್ನಿಸುತ್ತದೆ. ಎಂಟು ಹತ್ತು ಮಂದಿ ಪೊಲೀಸರು ಆ ಮನೆಯ ಸುರಕ್ಷತೆಯನ್ನು ನೋಡಿಕೊಳ್ಳುತ್ತಿದ್ದರು. ಒಬ್ಬ ಅಧಿಕಾರಿ ನನ್ನ ಆಧಾರ್ ಕಾರ್ಡನ್ನು ಪರಿಶೀಲಿಸಿ, ನಾನು ಬಂದಿರುವ ಸ್ಥಳ, ಉದ್ದೇಶ, ಇವುಗಳನ್ನೆಲ್ಲಾ ಔಪಚಾರಿಕವಾಗಿ ಪ್ರಶ್ನಿಸಿ, ಒಳಗೆ ಬಿಟ್ಟರು. ಒಬ್ಬ ವ್ಯಕ್ತಿ ಬಂದದ್ದೇ, 'ನಿಮಗೆ ಗೈಡ್‌ನ ಅವಶ್ಯಕತೆ ಇದೆಯೇ' ಎಂದು ಕೇಳಿದರು. ಎಲ್ಲಾ ವಿವರಗಳೂ ದಕ್ಕಬಹುದೆನ್ನುವ ಆಸೆಯಿಂದ 'ಹೌದು' ಎಂದೆ. ಆತ ಒಳಗೆ ಕರೆದೊಯ್ದರು. ಚಪ್ಪಲಿ ಬಿಟ್ಟು ಒಳಗೆ ಬರುವಂತೆ ಹೇಳಿದರು. ಒಳಗೆ ಹೋದ ಕೂಡಲೇ ಸಂಭ್ರಮ ಮತ್ತು ನಿರಾಸೆ ಎರಡೂ ಆಯಿತು. ಏಕೆಂದರೆ, ಯಾವ ಕೊಠಡಿಯ ಒಳಗೂ ಹೋಗದಂತೆ ದಪ್ಪ ಹಗ್ಗವನ್ನು ಉದ್ದಕ್ಕೂ ಕಟ್ಟಿದ್ದರು. ಒಂದನ್ನು ಹೊರತುಪಡಿಸಿ ಆ ಮನೆಯ ಯಾವ ಕೋಣೆಯ ಒಳಗೂ ನಾವು ಹೋಗುವಂತಿಲ್ಲ. ವಸ್ತುಗಳನ್ನು ಹಾಳು ಮಾಡಿಬಿಡುತ್ತಾರೆ ಎನ್ನುವ ಕಾರಣಕ್ಕೆ ಹೀಗೆ ಮಾಡಲಾಗಿದೆ ಎಂದರು.

ಪ್ರವೇಶವಾದ ಕೂಡಲೇ ಎದುರಿಗೆ ಅಂಬೇಡ್ಕರ್ ಕೂತು ಅಧ್ಯಯನ ಮಾಡುತ್ತಿದ್ದ ಸ್ಟಡಿ ರೂಂ ಇದೆ. ಅಲ್ಲಿ ಅವರ ಕೆಲವು ಪುಸ್ತಕಗಳನ್ನು, ಅವರು ಬಳಸುತ್ತಿದ್ದ ಕನ್ನಡಕ ಮತ್ತು ಕೊನೆಗಾಲದಲ್ಲಿ ಹಿಡಿಯುತ್ತಿದ್ದ ಕೋಲು, ಬಳಸುತ್ತಿದ್ದ ಕುರ್ಚಿ ಮತ್ತು ಟೇಬಲ್ ಈ ಎಲ್ಲವೂ ಇವೆ. ಅವರ ಕನ್ನಡಕವಂತೂ ಜಗತ್ಪ್ರಸಿದ್ಧವಷ್ಟೇ. ಆ ಕಪ್ಪು ಫ್ರೇಮಿನ ದಪ್ಪ ಕನ್ನಡಕ, ಅಂಬೇಡ್ಕರ್ ಅಲ್ಲೇ ಓದುತ್ತಾ ಕೂತಿರುವವರು ಎಲ್ಲೋ ಹೋಗಿದ್ದಾರೆ, ಇನ್ನೇನು ಇದೀಗ ಬಂದು ಆ ಕನ್ನಡಕ ಧರಿಸಿ, ಮತ್ತೆ ಓದಲು ಕೂರುತ್ತಾರೇನೋ ಎನ್ನುವ ಭಾವವನ್ನು ಮೂಡಿಸುತ್ತಿತ್ತು. ಆ ಸ್ಟಡಿ ಟೇಬಲ್ ಮತ್ತು ಅವರ ಪುಸ್ತಕಗಳನ್ನಿರಿಸಿದ ಬುಕ್ ಶೆಲ್ಫಿನ ವಿನ್ಯಾಸ ತುಂಬಾ ಸುಂದರವಾಗಿತ್ತು. ಅರ್ಧ ಕಮಾನಿನ ಆಕಾರದ ಎಂದು ಒರಟಾಗಿ ಹೇಳಬಹುದಾದ ವಿನ್ಯಾಸದಲ್ಲಿ ಆ ಬುಕ್ ಶೆಲ್ಫ್‌ಗಳಿದ್ದವು. ಅದರ ತುಂಬಾ ಪುಸ್ತಕಗಳನ್ನು ಜೋಡಿಸಿದ್ದರು. ನಾನು ಆ ಗೈಡ್‌ಗೆ ಕೇಳಿದೆ: 'ಕೆಲವಾದರೂ ಪುಸ್ತಕಗಳನ್ನು ನಾನು ನೋಡಿ ವಾಪಸ್ ಕೊಡುತ್ತೇನೆ. ನೀವೇ ಒಳಗೆ ಹೋಗಿ ಆ ಪುಸ್ತಕಗಳನ್ನು ನನಗೆ ತಂದು ಕೊಡಿ' ಎಂದು. ಆತ, 'ನನಗೂ ಒಳಗೆ ಹೋಗಲು ಅನುಮತಿ ಇಲ್ಲ ಮೇಡಂ' ಎಂದ.

ಜಗತ್ತಿನಲ್ಲೇ ಒಬ್ಬ ವ್ಯಕ್ತಿಯ ಹತ್ತಿರ ಇರಬಹುದಾದ ಅತಿ ದೊಡ್ಡ ಗ್ರಂಥಾಲಯ ಅಂಬೇಡ್ಕರ್ ಅವರದ್ದು ಎನ್ನುವ ಮಾತನ್ನು ಎಲ್ಲೋ ಓದಿದ ನೆನಪು. ಅದು ಸತ್ಯವೋ ಅಲ್ಲವೋ ನನಗೆ ಗೊತ್ತಿಲ್ಲ. ಆದರೆ ಅಲ್ಲಿರುವ ಪುಸ್ತಕಗಳು ಯಾವುವು ಎನ್ನುವುದನ್ನು ನೋಡುವ ನನ್ನ ಕುತೂಹಲ ಮತ್ತು ಆಸೆ ತಣಿಯಲಿಲ್ಲ. ಆ ಕನ್ನಡಕ ಮತ್ತು ಕೋಲನ್ನು ಎಂದಾದರೊಂದು ದಿನ ಮುಟ್ಟಬೇಕೆನ್ನುವ ಆಸೆ ಈಗಲೂ ಇದೆ ನನಗೆ.

ಎಷ್ಟೋ ಹೊತ್ತು ಆ ಕೋಣೆಯನ್ನು ನೋಡುತ್ತಾ ನಿಂತೇ ಇದ್ದೆ. ಮನಸ್ಸಿನಲ್ಲಿ ಏನೇನೋ ವಿಚಾರಗಳು ಹಾದುಹೋದವು. ಏನೆಲ್ಲ ಪ್ರಯತ್ನಗಳ ನಂತರವೂ ಹಿಂದೂ ಧರ್ಮ ಮತ್ತು ಸವರ್ಣೀಯರನ್ನು ಬದಲಾಯಿಸಲು ಸಾಧ್ಯವಿಲ್ಲ ಎನ್ನುವ ವಿಷಾದದ ತೀರ್ಮಾನಕ್ಕೆ ಅಂಬೇಡ್ಕರ್ ಇಲ್ಲಿ ಕೂತು ಓದುತ್ತಿರುವಾಗಲೇ ಬಂದಿರಬಹುದೆ? ಬೌದ್ಧ ಧರ್ಮಕ್ಕೆ ಸೇರುವ ತೀರ್ಮಾನವನ್ನೂ ಅವರು ಇಲ್ಲೇ ತೆಗೆದುಕೊಂಡಿರಬಹುದೆ? ಪುಸ್ತಕಗಳು ಮತ್ತು ಓದು ಅಂಬೇಡ್ಕರ್ ಅವರ ಆಪ್ತಮಿತ್ರರು. ಜಗತ್ತಿನ ಖ್ಯಾತ ಪ್ರಕಾಶನ ಸಂಸ್ಥೆಗಳು, ಪುಸ್ತಕಗಳು ಪ್ರಕಟವಾದ ಕೂಡಲೇ ಅಂಬೇಡ್ಕರ್ ಅವರಿಗೆ ಪ್ರತಿಯನ್ನು ಕಳುಹಿಸುತ್ತಿದ್ದ ಸಂಗತಿ ನೆನಪಾಯಿತು. ಅದೆಷ್ಟೋ ಪುಸ್ತಕಗಳನ್ನು ಅಂಬೇಡ್ಕರ್ ಅದೆಷ್ಟು ತಲಸ್ಪರ್ಶಿಯಾಗಿ ಓದಿರುತ್ತಿದ್ದರೆಂದರೆ, ವಿಷಯಗಳನ್ನು ಪುಟ ಸಂಖ್ಯೆ ಮತ್ತು ಪ್ಯಾರಾದ ಸಮೇತ ಅವರು ಹೇಳಬಲ್ಲವರಾಗಿದ್ದರಂತೆ. ಅವರು ಅಭ್ಯಾಸ ಮಾಡಿದ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಅಂಬೇಡ್ಕರ್ ಬಳಸುತ್ತಿದ್ದ ಟೇಬಲ್ ಮತ್ತು ಕುರ್ಚಿಯನ್ನು ರಾಷ್ಟ್ರೀಯ ಸ್ಮಾರಕವೆಂದು ಕಾಪಾಡಿಕೊಂಡು ಬಂದಿರುವುದೂ ಆ ಹೊತ್ತಿನಲ್ಲಿ ನೆನಪಾಯಿತು. ಅಂಬೇಡ್ಕರ್ ಅವರಿಗೆ ಅಪಾರ ಸಂಖ್ಯೆಯ ಸ್ನೇಹಿತರೂ, ಆತ್ಮೀಯರೂ, ಅಭಿಮಾನಿಗಳೂ ಎಲ್ಲರೂ ಇದ್ದರು. ಈ ಸಾಲಿನಲ್ಲಿ ಮೊದಲು ನಿಲ್ಲುವುದು ಪುಸ್ತಕಗಳು ಎನಿಸುತ್ತದೆ.

ಗೈಡ್ 'ಮುಂದೆ ಹೋಗೋಣವೇ?' ಎಂದು ಹೇಳಿದ. ಆ ಅಧ್ಯಯನ ಕೋಣೆಯ ಎಡಭಾಗದಲ್ಲಿ ಎರಡು ಕೋಣೆಗಳಿವೆ. ಒಂದು ಅಡುಗೆ ಮನೆ, ಮತ್ತೊಂದು ಅತಿಥಿಗಳ ಜೊತೆ ಅಂಬೇಡ್ಕರ್ ಕೂರುತ್ತಿದ್ದ ಕೋಣೆ. ಅಲ್ಲಿನ ಪೀಠೋಪಕರಣಗಳನ್ನೂ ಜತನವಾಗಿ ಇರಿಸಲಾಗಿದೆ. ಆ ಕಾಲದ ಅಭಿರುಚಿಯಂತೆ ಮರದ ಫ್ರೇಮಿಗೆ ವೈರ್‌ಗಳನ್ನು ಹೆಣೆದು ಮಾಡಿದ ಪೀಠೋಪಕರಣಗಳು. ಅದರ ಬಲ ಮಗ್ಗುಲಿಗೆ ಅಡುಗೆ ಕೋಣೆ. ಸಮಸ್ತವೂ ಹಿತ್ತಾಳೆಯ ಪಾತ್ರೆಗಳು. ತಟ್ಟೆ, ಪರಾತ, ಅಡುಗೆಯ ಪಾತ್ರೆಗಳು, ಲೋಟ ಇತ್ಯಾದಿ. ಅಧ್ಯಯನ ಕೋಣೆಯ ಹೊರಕೋಣೆಯಲ್ಲಿ ಕೆಲವು ಮರದ ಬೀರುಗಳಲ್ಲಿ ಹಿತ್ತಾಳೆ ಪಾತ್ರೆಗಳನ್ನು ಜೋಡಿಸಿದ್ದಾರೆ. ಆಶ್ಚರ್ಯಕರವೆನ್ನುವಂತೆ ಅಲ್ಲಿ ದೇವರ ಪೂಜೆಗೆ